**<u>ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ</u>**

**<u>ಸಿ.ಸಿ. ನಂ.1480/2022</u>**

**ಚಾ.ಸಾ. - 3**

**ಪ್ರಾ.ಸಾ. - 3**

**ಸಾಕ್ಷಿದಾರರ ಹೆಸರು** ಃ ಜಗದೀಶ ಈರಪ್ಪ ಕಾಜಗಾರ

**ಸಾಕ್ಷಿದಾರರ ವಯಸ್ಸು** ಃ 26 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಚಾಲಕ

**ಸಾಕ್ಷಿದಾರರ ವಿಳಾಸ** ಃ ಗುಡಿಕಟ್ಟಿ

---

**<u>ಪ್ರಮಾಣ ವಚನ ಮಾಡಿದ ದಿನಾಂಕ ಃ 17-04-2023</u>**

**<u>ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ</u>**

ಚಾಸಾ-2 ರವರ ಪರಿಚಯ ಇರುತ್ತದೆ. ಈಗ ಸುಮಾರು 1 ವರ್ಷದ ಹಿಂದೆ ದೊಡವಾಡ ಪೊಲೀಸರು ಠಾಣೆಗೆ ಕರೆಯಿಸಿ ಕೆಲವು ದಾಖಲೆಗಳ ಮೇಲೆ ನನ್ನ ಸಹಿ ಪಡೆದು ಪೋಟೋತೆಗೆಯಿಸಿರುತ್ತಾರೆ. ಅದು ಯಾವಾ ಕಾರಣಕ್ಕಾಗಿ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯುನಿಪಿ- 2 ಮತ್ತು 3 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ 7 ನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಅಪಘಾತ ಸ್ಥಳ ಹಾಗೂ ವಾಹನ ತಡೆ ಪಂಚನಾಮೆ ಮಾಡಿರುವುದಿಲ್ಲ ಯಾವುದೇ ವಾಹನವನ್ನು ವಶಕ್ಕೆ ಪಡೆದಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು ಃ ಎಪಿಪಿ ಅವರಿಂದ</u>**

ದಿಃ 10-03-2022 ರಂದು ಪೊಲೀಸರು ನನ್ನನ್ನು ಬೆಳವಡಿ ಗ್ರಾಮದ ಖಂಡೋಜಿ ಇವರ ಜಮೀನಿನ ಹತ್ತಿರ ಇರುವ ರಸ್ತೆಯ ಮೇಲೆ ಕರೆಯಿಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಚಾಸಾ-7 ರವರು ಹಾಜರಿದ್ದು ಸ್ಥ.ಳತೋರಿಸಿದ ಮೇರೆಗೆ ಬೆಳಿಗ್ಗೆ 9.00 ರಿಂದ 9.45 ಗಂಟೆ ವರೆಗೆ ನಿಪಿ-2 ರಂತೆ ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿ ಸಹಿ ಪಡೆದು ಕಚ್ಚಾ ನಕಾಶೆಯನ್ನು ತಯಾರಿಸಿ ಅದಕ್ಕೂ ಸಹಿ

ಪಡೆದು ನಿಪಿ-4 ಮತ್ತು 5 ರಂತೆ ಬಾವಚಿತ್ರವನ್ನು ತೆಗೆಯಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮರಳಿ ನಮ್ಮನ್ನು ದೊಡವಾಡ ಠಾಣೆಗೆ ಕರೆದುಕೊಂಡು ಬಂದುಚಾಸಾ-7 ರವರು ತೋರಿಸಿದ ಠಾಣಾ ಆವರಣದಲ್ಲಿದ್ದ ಮೋಟರಸೈಕಲ ನಂ. ಕೆಎ 24 ಎಕ್ಸ 9158 ಇದರ ವಾಹನ ತಡೆ ಪಂಚನಾಮೆಯನ್ನು 10.00 ಗಂಟೆ ಯಿಂದ 10.30 ಗಂಟೆ ವರೆಗೆ ನಿಪಿ-3 ರಂತೆ ಮಾಡಿ ನನ್ನ ಸಹಿ ಪಡೆದು ನಿಪಿ- 6 ಮತ್ತು 7 ನ್ನು ತೆಗೆಯಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>

ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ